ಎಂ.ವಿ.ಸಿ. ನಂ. 1138/2023 ಪಿಡಬ್ಲ್ಯೂ -1

(ಇಂದು ದಿನಾಂಕಃ 27-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**<u>ಪಾಟೀ ಸವಾಲು: ಎದುರುದಾರರ ಪರ ಶ್ರೀ VRM ವಕೀಲರಿಂದಃ</u>**

ಮೃತ ಪ್ರಕಾಶ ನನ್ನ ಮಗ. ಅಪಘಾತ ಆದ ದಿನ ಆತನು ಹೊರ ಶೌಚಾಲಯಕ್ಕೆ ಹೋಗಿದ್ದನು. ಅಪಘಾತವಾದ ರಸ್ತೆಯು ಸಿ.ಸಿ ರಸ್ತೆ ಇದೆ ಎಂದರೆ ಸರಿ. ನನ್ನ ಮಗ ಹೊರ ಶೌಚಾಲಯಕ್ಕೆ ಹೋಗುತ್ತಿದ್ದಾಗ ಹಿಂದಿನಿಂದ ಬಂದು ಟ್ರ್ಯಾಕ್ಟರ ಡಿಕ್ಕಿ ಪಡಿಸಿ ಆತನ ಮೇಲಿಂದ ಹಾಯ್ದು ಹೋಗಿರುತ್ತದೆ. ಅಪಘಾತವು ನಡು ರಸ್ತೆಯ ಮೇಲೆ ಆಗಿರುತ್ತದೆ ಎಂದರೆ ಸರಿಯಲ್ಲ. ಪೋಲೀಸರು ಅಪಘಾತವಾದ ಸ್ಥಳ ನಡು ರಸ್ತೆಯಲ್ಲಿ ಆಗಿರುತ್ತದೆ ಎಂದು ತಮ್ಮ ಕಚ್ಚಾ ನಕಾಶೆಯಲ್ಲಿ ತೋರಿಸಿರುತ್ತಾರೆ ಎಂದರೆ ತಪ್ಪಾಗಿ ತೋರಿಸಿರುತ್ತಾರೆ. ನನ್ನ ಮಗ ನಡು ರಸ್ತೆಯಲ್ಲಿ ನಡೆದುಕೊಂಡು ಹೋಗಿದ್ದರಿಂದ ಆತನ ತಪ್ಪಿ ನಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ.

ನನ್ನ ಮಗ ವಿದ್ಯಾಭ್ಯಾಸ ಮಾಡುತ್ತಿದ್ದ ಮತ್ತು ಹಾಲು ಹಾಕುತ್ತಿದ್ದ. ನನ್ನ ಮಗನಿಗೆ ಆಗ 18 ವರ್ಷ ವಯಸ್ಸು ಆಗಿತ್ತು. ನನ್ನ ಮಗ ವಿದ್ಯಾಭ್ಯಾಸ ಬಿಟ್ಟು ಬೇರೆ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಗ ಹಾಲು ಮಾರಾಟ ಮಾಡುವ ಕೆಲಸ ಮಾಡುತ್ತಿದ್ದ ಎಂದು ತೋರಿಸಲು ದಾಖಲಾತಿಯನ್ನು ತೋರಿಸಿಲ್ಲ ಎಂದರೆ ಸರಿ. ನನ್ನ ಮಗ ತಿಂಗಳಿಗೆ 18000/- ಗಳಿಸುತ್ತಿದ್ದ ಎಂದು ತೋರಿಸಲು ದಾಖಲಾತಿಯನ್ನು ಸಲ್ಲಿಸಿಲ್ಲ ಎಂದರೆ ಸರಿ.

ನನ್ನ ಮಗನಿಗೆ ಯಾವುದೇ ಆದಾಯ ಇಲ್ಲದ ಕಾರಣ ನಾನಾಗಲಿ ಒಂದು ಮತ್ತು ಮೂರನೇ ಅರ್ಜಿದಾರರಾಗಲಿ ಆತನ ಮೇಲೆ ಆದಾಯದ ಮೇಲೆ ಅವಲಂಬನೆ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಗನ ತಪ್ಪಿ ನಿಂದ ಅಪಘಾತವಾಗಿದ್ದರೂ ಒಂದು ದಿನ ತಡ ಮಾಡಿ ಟ್ರ್ಯಾಕ್ಟರ ಕೆ.ಎ 32 ಟಿ.ಬಿ 6526 ನೇದ್ದರ ಮೇಲೆ ಸುಳ್ಳು ದೂರನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಅಪಘಾತವು 26-06-2022 ರಂದು ಆಗಿದ್ದರೂ ಈ ಅರ್ಜಿಯನ್ನು ದಿನಾಂಕ 22-06-2023 ರಂದು ದಾಖಲಿಸಿದ್ದೇವೆ ಎಂದರೆ ಸರಿ. 177 ದಿನಗಳ ತಡಮಾಡಿ ಅರ್ಜಿಯನ್ನು ಸಲ್ಲಿಸಿದ್ದೇವೆ ಎಂದರೆ ಮಗನ ಕಳೆದುಕೊಂಡ ದುಃಖದಲ್ಲಿ ಇದ್ದ ಕಾರಣ ತಡವಾಗಿ ಅರ್ಜಿಯನ್ನು ಸಲ್ಲಿಸಿದ್ದೇವೆ. ಎದುರುದಾರರು ಯಾವುದೇ ಪರಿಹಾರವನ್ನು ನೀಡಲು ಭಾದ್ಯತೆಯನ್ನು ಹೊಂದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ,
ಚಿಂಚೋಳಿ.